550

ಕಡೂರು ಡಿಸ್ಟ್ರಿಕ್ಟ್.

ಕೊಪ್ಪ ತಾಲ್ಲೂಕು.

ಇಸ್ತಿಹಾರ್‌ನಾಮೆ.

ತಾರೀಖು 6ನೇ ಅಕ್ಟೋಬರ್ ಸ್ರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೊಪ್ಪ ತಾಲ್ಲೂಕು ಬೈರೇದೇವರು ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ರ್ 1896ನೇ ಇಸವಿ ಡಿಸೆಂಬರ್ ತಾರೀಖು 7ನೇ ಸೋಮವಾರ ಹಗಲು 11 ಘಂಟೆಗೆ ಕಡೂರು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ವಳಪಡಿಸಿ ಕೊಪ್ಪ ತಾಲ್ಲೂಕು ಅಮಲ್‌ದಾರ್ರ ರೂಬರೂ ಹರಿಹರಪುರ ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಜಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರದ ಸವಾಲ್ ಮೊಬಲಗು (ಅಪ್ಸೆಟ್ ಪ್ರೈಸ್) ಪೈಕಿ ಯಾ ಜವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರ ರ್ಯಾರಾದರೂ ಪಡೆದರೆ ದರಖಾಸ್ತುದಾರನ ಷುರೂ ಶೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರದ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯೆಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಕೇಕಡಾ 25 ರೂಪಾಯಿಗಳ ಮೇರೆ ಆಗುವ ಶೇವಣಿ ಮೊಬಲಗನ್ನು ಹರಾಜು ಖೈದಾದ ವಡನೆಯೇ 2ನೇ ಪ್ಯಾರಾವಲ್ಲಿ ನಮೂದಾಗುವ ಸಂದರ್ಭಾನುಸಾರ ಷುರು ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಜಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಜೆಯೇ ಆಖೈರ್ ಜಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ವಿಧಾಯಕ ಮಾಡಲ್ಪಟ್ಟ ಕಾಲದೊಳಗೆ ಖೀರಿದಿ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡದೆ ತಪ್ಪಿದರೆ ಡಿಪಾಜಿಟ್ ಮೊಬಲಗಿನಲ್ಲಿ ಖೀರಿದಿಗಾಗಿ ತಗಲಿರುವ ಖರ್ಚು ವಜಾ ಜಾತಾ ಬಾಕಿನಿಂತ ಶೇವಣಾತಿ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರತಕ್ಕದ್ದು. ಮತ್ತು ಸ್ವತ್ತು ಪುನಹ ವಿಕ್ರಯಿಸಲ್ಪಡುವ ಮನುಷ್ಯನ ಸ್ವತ್ತಿಗೆ ಇದ್ದ ಹಕ್ಕನ್ನು ಕಳದುಕೊಂಡದ್ದಲ್ಲದೆ ಅನಂತರ ಮೊಖಲಗಿನ ಯಾವ ಭಾಗದ ಹಕ್ಕು ಇಲ್ಲದವನಾಗಿ ಇರುತ್ತಾನೆ. ಪರಂತು ಈ ಷರತ್ತನ್ನು ಜಾರಿಯಲ್ಲಿ ತರತಕ್ಕದ್ದು. ಅಧಿಕವಾದ ತೊಂದರೆ ಇದ್ದಲ್ಲಿ ಯಾವ ಸಂದರ್ಭದಲ್ಲಾದರೂ ಡೆಪ್ಯೂಟಿ ಕಮ್ಮಿಷನರಿಗೆ ತೋರಿ ಬಂದರೆ ಅಂಥಾವುಗಳನ್ನು ಸರಕಾರದ ಆರ್ಡರುಬಗ್ಯೆ ತಿಳಿವರೆಸಿ ಮಾಡತಕ್ಕದ್ದಕ್ಕೆ ಅರ್ಜಂಟಾಗಿರುತ್ತಾರೆ. ಕ್ರಮೇಣ ಮಾಡಲ್ಪಟ್ಟ ಹರಾಜಿನಲ್ಲಿ ಉತ್ಪತ್ತಿಯಾಗುವ ಮೊಬಲಗು ಮೊದಲು ಹರಾಜಿನಲ್ಲಿ ಜಡದರಖಾಸ್ತು ಮಾಡಿ ತಪ್ಪಿಹೋದ ಮನುಷ್ಯನ ಸವಾಲಿಗಿಂತಲೂ ಕಮ್ಮಿಯಾಗುವ ಸಂದರ್ಭದಲ್ಲಿ ಇಂಥಾ ವ್ಯತ್ಯಾಸದ ಮೊಬಲಗನ್ನು ಡೆಪ್ಯೂಟಿ ಕಮ್ಮಿಷನ್ನರವರು ಜಮೀ ಕಂದಾಯದ ಬಾಕಿಯಂತೆ ವಸೂಲ್ ಮಾಡತಕ್ಕದ್ದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರು ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನ್ನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜ್‌ದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ.		ಷರಾ.
				ವಿಸ್ತೀರ್ಣ.	ಆಕಾರ.	
112ರ ಪೈ.	ಕೊಂಚಿ ಯಸ್ಟ್ರೆಟ್ ಮೆನೆಸ್ಟ್ರ್ ಹೀ ಸಾಹೇ ಬರವರು.	ಪೈಕಾನೇಸ್ಟ್ರು ಹಾಡ್ಲ್ಯು ಮೊಗ.ಂಗ ಹೋಬಳಿ ಬೈರೇದೇವರು ಗ್ರಾಮ.	1 ಪೂರ್ವಕ್ಕೆ—ದೇವಸ್ಥಾನಕ್ಕೆ ಬಿಟ್ಟಜಮೀ ಕೊಂಚಾ ಸರ್ವೆನಂ ಇರುವ ರು ಗಡಿ. 2 ದಕ್ಷಿಣಕ್ಕೆ—ಹಳ್ಳಿ. 3 ಪಶ್ಚಿಮಕ್ಕೆ—ನಂ. 111ನೇ ಖರಾರಸುದ್ದ 4 ಉತ್ತರಕ್ಕೆ—ಹಳ್ಳಿ.	62—2		

ತಿಳುವಳಿಕೆ ಪರಾ.—ಒಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಒಂದು ಕಬ್ಜಾ ಅಳತೆ ಪ್ರಕಾರ ಅಂದಾಜು ಎಕರೆ ಮೇಲೆ ಅಸ್ಸೆಸ್ಟ್‌ಮೆಂಟ್ಸ್ ವಸೂಲಾದ್ದರಲ್ಲಿ ಕರಾರು ವಾಕಾ ಮೋಜಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಸ್ಸೆಸ್ಟ್‌ಮೆಂಟ್ಸ್ ವಸೂಲೀ ಕೊಡುವದಕ್ಕೆ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡೆಯುವದಕ್ಕೆ ಆಗಲಿ ಜಮೀರ್ ಹಿಡುವಳಿದಾರನು ಬದ್ಧ ವ ಆರ್ಹನಾಗಿರಬೇಕು.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯೂಟಿ ಕಮ್ಮಿಷನರ್.

ಮೈಸೂರ ಗೆಜೆಟ್ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲು ಮೈಸೂರು ಕೇವಿ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಷ್ ಮಾಹೀ ಯಾ ಕ್ವಾರ್ಟರಿಗೆ		ದಾಮಾಷಾಯಿ ಪ್ರಕಾರ ದರಗಳು
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇರ್ಸ್ ಯಾ ಆಕ್ಟ್ಸುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮತ್ತು ಂ 155ನೇ ನಂಬರ್ ಉಳ್ಳ ಗವರ್ಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಕೇಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳ ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ವಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ್ 21ನೇ ಮತ್ತು ಂ 24205—6—ಜಿ. 6700ನೇ ನಂಬರ್ ಗವರ್ಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟ್‌ನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟಿ ಬಗ್ಗೆ ನೋಟಿಸ್‌ಗಳು:—

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ	..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	.. ..	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸ್‌ಗಳಿಗೆ :—			
ಮೊದಲನೇ ಸಲಕ್ಕೆ	.. .. ..	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	.. ..	2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಒಗರ್ ಚಾರ್ಜ್ ಪ್ರಕಟಿಸಲ್ಪಡುತವೆ.			
ಡ್ಯೂಪ್ಲಿಕೇಟ್ ಕಾಫೀ ಪಟ್ಟೆ ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸ್‌ಗಳಿಗೆ :—			
ಮೊದಲನೇ ಸಲಕ್ಕೆ ಪುಟ 1ಕ್ಕೆ	..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ ”	..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—			
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಬ್ಲಿ 1ಕ್ಕೆ	..	0	8
ಎರಡನೇ ದಫಾ ಡಿಟೋ ಡಿಟೋ	..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	.. ..	0	4

ಪರಾ.—ಚಂದಾ ವಗೈರೇ ಬಗ್ಗೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟ್ಯಾಗ, ರೂಪಾಯಿಗ ವಂದಾಣಿ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ್ ಗವರ್ಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದುಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.